**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 471/2023**

**ಪ್ರಾಸಾಃ- 5 ಚಾಸಾಃ- 6**

| | | |
|---|---|---|
| ಸಾಕ್ಷಿಯ ಹೆಸರು | : | ಗೀತಾ |
| ಗಂಡನ ಹೆಸರು | : | ಬಿ.ಚಂದ್ರ ಶೇಖರ್ |
| ವಯಸ್ಸು | : | 41 ವರ್ಷ |
| ವೃತ್ತಿ | : | ಶಿಕ್ಷಕಿ |
| ವಾಸಸ್ಥಳ | : | ಬಳ್ಳಾರಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 17.11.2025**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಚಾಸಾ 1 ನನ್ನ ಗಂಡ. ಚಾಸಾ 7 ನನ್ನ ಅಣ್ಣ. ನಾವು ವಾಲ್ಮೀಕಿ ಜನಾಂಗಕ್ಕೆ ಸೇರಿದ್ದೇವೆ. 1 ನೇ ಆರೋಪಿಯಿಂದ ನನ್ನ ಗಂಡ ರೂ. ಒಂದೂವರೆ ಲಕ್ಷ ಹಣವನ್ನು ಸಾಲ ಪಡೆದಿದ್ದರು. ಸದರಿ ಹಣವನ್ನು ವಾಪಾಸ್ಸು ಕೊಟ್ಟಿಲ್ಲ ಎಂದು ಹೇಳಿ 1 ನೇ ಆರೋಪಿ ಚಾಸಾ 1 ರವರ ವಿರುದ್ದ ಚೆಕ್ ಬೌನ್ಸ್ ಕೇಸನ್ನು ರೂ. 2 ಲಕ್ಷಕ್ಕೆ ಹಾಕಿದ್ದರು. ಪಂಚಾಯಿತಿ ಆದ ನಂತರ ನನ್ನ ಗಂಡ ರೂ. ಒಂದು ಲಕ್ಷದ 80 ಸಾವಿರ ಹಣವನ್ನು 1 ನೇ ಆರೋಪಿಗೆ ಕೊಟ್ಟು ಉಳಿದ ರೂ. 20 ಸಾವಿರ ಹಣ ನಂತರ ಕೊಡುವುದಾಗಿ ಹೇಳಿದ್ದ. 1 ನೇ ಆರೋಪಿ ಪುನಃ ನನ್ನ ಗಂಡನ ವಿರುದ್ದ ಕೇಸನ್ನು ಹಾಕಿದ್ದ. ಸದರಿ ಕೇಸಿನಲ್ಲಿ ನನ್ನ ಗಂಡ ರೂ. 60 ಸಾವಿರ ಹಣ ಕೊಡುವುದಾಗಿ ಒಪ್ಪಿಕೊಂಡಿದ್ದರು. ದಿಃ 12-11-2022 ರಂದು ಎಸ್ ಪಿ ಸರ್ಕಲ್ ಹತ್ತಿರ 1 ನೇ ಆರೋಪಿ ಹಾಗೂ ನನ್ನ ಗಂಡನ ನಡುವೆ ಜಗಳ ಆಗಿತ್ತು. ದಿಃ 14-11-2022 ರಂದು ಚಾಸಾ 1 ಕೆ ಎಸ್ ಆರ್ ಟಿ ಸಿ ಡಿಪೋ ಹತ್ತಿರ ಮದ್ಯಾಹ್ನ 1-00 ಗಂಟೆಗೆ ಹೋಗುತ್ತಿದ್ದಾಗ ಆರೋಪಿತರು ಚಾಸಾ 1 ರವರ ಜೊತೆ ಜಗಳ ತೆಗೆದು ವಾಲ್ಮೀಕಿ ಸೂಳೆ ಮಗನೇ ಎಂದು ಬೈದು, ಜಾತಿನಿಂದನೆ ಮಾಡಿದ್ದರು. ಚಾಸಾ 1 ರವರ ಷರ್ಟ್‌ನ್ನು ಆರೋಪಿತರು ಹರಿದು ಹಾಕಿದ್ದರು. ನಂತರ ಚಾಸಾ 1 ಮನೆಗೆ ಬಂದು ತನಗೆ ಅವಮಾನ ಆಗಿದೆ ಎಂದು ಹೇಳಿ ಮನೆಯಲ್ಲಿದ್ದ ಫಿನಾಯಿಲ್ ಮತ್ತು ಆಲ್‌ಔಟ್ ಲಿಕ್ವಿಡ್‌ನ್ನು ಕುಡಿದಿದ್ದರು.

ನಂತರ ನನಗೆ ಫೋನ್ ಮಾಡಿ ವಿಷಯ ತಿಳಿಸಿದರು. ನಾನು ನನ್ನ ಅಣ್ಣ ಚಾಸಾ 7 ಈತನಿಗೆ ಫೋನ್ ಮಾಡಿ ಮನೆಗೆ ಕರೆಸಿಕೊಂಡು ಅವರ ಜೊತೆ ನನ್ನ ಗಂಡನನ್ನು ಕರೆದುಕೊಂಡು ಓಪಿಡಿ ಆಸ್ಪತ್ರೆಗೆ ಹೋಗಿದ್ದೆ. ನನ್ನ ಗಂಡನನ್ನು ಆಸ್ಪತ್ರೆಗೆ ದಾಖಲು ಮಾಡಿದ್ದೆವು. ಆಸ್ಪತ್ರೆಯಲ್ಲಿ ಚಾಸಾ 1 ರವರನ್ನು ಘಟನೆಯ ಬಗ್ಗೆ ವಿಚಾರಿಸಿದ್ದೆ. ಚಾಸಾ 1 ನನಗೆ ನಡೆದ ಘಟನೆಯ ಬಗ್ಗೆ ತಿಳಿಸಿದ್ದರು. ಮನೆಯಲ್ಲಿದ್ದ ಫಿನಾಯಿಲ್ ಮತ್ತು ಆಲ್‌ಔಟ್ ಲಿಕ್ವಿಡ್ ಬಾಟಲಿಗಳನ್ನು ನನ್ನ ಗಂಡ ಪುನಃ ಕುಡಿಯಬಹುದು ಎಂಬ ಕಾರಣದಿಂದಾಗಿ ಮನೆಯ ಹೊರಗೆ ಚರಂಡಿಯಲ್ಲಿ ಬೀಸಾಕಿದ್ದೆ. ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ.

<u>**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಎಸ್ ವಕೀಲರಿಂದಃ**</u>

ನನಗೆ ಚಂದ್ರಮೋಹನ್ ರವರ ಪರಿಚಯ ಇಲ್ಲ. ಅವರ ಹೆಸರು ಕೇಳಿದ್ದೇನೆ. ನನಗೆ ಜಿ.ಭಾರ್ಗವಿ ಪರಿಚಯ ಇಲ್ಲ. ನನ್ನ ಗಂಡ ಜಿ.ಭಾರ್ಗವಿ ಮತ್ತು ಚಂದ್ರ ಮೋಹನ್ ರವರಿಂದ ಸಾಲ ಪಡೆದಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲದ ವಿಚಾರವಾಗಿ ಉರವಕೊಂಡಂನಲ್ಲಿ ನನ್ನ ಗಂಡನ ವಿರುದ್ಧ ಚೆಕ್ ಬೌನ್ಸ್ ಕೇಸು ದಾಖಲು ಆಗಿತ್ತು ಎಂದರೆ ಸರಿ. ನನ್ನ ಗಂಡನ ವಿರುದ್ಧ ಚಂದ್ರ ಮೋಹನ್ ರವರು ಉರವಕೊಂಡದಲ್ಲಿ ಮತ್ತು ಜಿ.ಭಾರ್ಗವಿ ರವರು ಬಳ್ಳಾರಿಯಲ್ಲಿ ಕೇಸನ್ನು ಹಾಕಿದ್ದರು ಮತ್ತು ನನ್ನ ಗಂಡ ಅವುಗಳನ್ನು ರಾಜಿ ಮಾಡಿಕೊಂಡಿದ್ದರು ಎಂದರೆ ಸರಿ. ನನ್ನ ಗಂಡ ನ್ಯಾಯಾಲಯಗಳಲ್ಲಿ ಚಂದ್ರ ಮೋಹನ್ ಮತ್ತು ಜಿ.ಭಾರ್ಗವಿ ರವರಿಗೆ ಹಣವನ್ನು ವಾಪಾಸ್ಸು ಕೊಟ್ಟಿದ್ದ ಎಂದರೆ ಸರಿ. 1 ನೇ ಆರೋಪಿಯ ಬಳಿ ನನ್ನ ಗಂಡ ಹಣವನ್ನು ಸಾಲವಾಗಿ ಪಡೆದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ರೂ. 20 ಸಾವಿರ ಹಣವನ್ನು ನನ್ನ ಗಂಡ 1 ನೇ ಆರೋಪಿಗೆ ಬಾಕಿ ಕೊಡಬೇಕಾದ ಬಗ್ಗೆ ಬರೆಸಿಕೊಂಡ ಬಾಂಡ್ ಬಗ್ಗೆ ನಾವು ಪೋಲೀಸರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ. 1 ನೇ ಆರೋಪಿಯು ನನ್ನ ಗಂಡನ ವಿರುದ್ಧ ಯಾವುದೇ ನ್ಯಾಯಾಲಯಗಳಲ್ಲಿ ಯಾವುದೇ ಪ್ರಕರಣಗಳನ್ನು ಹಾಕಿಲ್ಲ ಎಂದರೆ ಸರಿ. 1 ನೇ ಆರೋಪಿ ಹಾಗೂ ಚಂದ್ರ ಮೋಹನ್ ರವರು ನಮಗೆ ಸಂಬಂಧಪಟ್ಟ ಚೆಕ್ಕುಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಹೇಳಿ ನಾನಾಗಲೀ ಅಥವಾ ನನ್ನ ಗಂಡನಾಗಲೀ ಯಾವುದೇ ನ್ಯಾಯಾಲಯಗಳಲ್ಲಿ ಅಥವಾ

ಪೋಲೀಸರ ಮುಂದೆ ಯಾವುದೇ ದೂರನ್ನು ಸಲ್ಲಿಸಿಲ್ಲ. ದಿಃ 12-11-2022 ರಂದು ನನ್ನ ಗಂಡ 1 ನೇ ಆರೋಪಿಗೆ ರೂ. 60 ಸಾವಿರ ಹಣವನ್ನು ಕೊಡಲು ಹೋಗಿದ್ದ ಬಗ್ಗೆ ಮತ್ತು ಸದರಿ ಹಣದ ಬಗ್ಗೆ ಯಾವುದೆ ದಾಖಲೆಗಳು ಇಲ್ಲ. ನನ್ನ ಗಂಡ 1 ನೇ ಆರೋಪಿಗೆ ರೂ. 60 ಸಾವಿರ ಆಗಲೀ ಅಥವಾ ರೂ. 20 ಸಾವಿರ ಆಗಲೀ ಹಣ ಕೊಡಲು ಬಾಕಿ ಇದ್ದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ದಿಃ 12-11-2022 ರಂದು ನನ್ನ ಗಂಡನಿಗೆ ಆರೋಪಿತರು ಜಾತಿನಿಂದನೆ ಮಾಡಿದ ಬಗ್ಗೆ ನಾನಾಗಲೀ ಅಥವಾ ನನ್ನ ಗಂಡನಾಗಲೀ 1 ನೇ ಆರೋಪಿಯ ವಿರುದ್ದ ಯಾವುದೇ ಕೇಸನ್ನು ಹಾಕಿಲ್ಲ. ದಿಃ 12-11-2022 ರಂದು ನನ್ನ ಗಂಡ ಸುದೀರ್ ಮತ್ತು ವೆಂಕಟ್ ಜೊತೆ 1 ನೇ ಆರೋಪಿ ಬಳಿ ಹೋಗಿದ್ದ. ದಿಃ 14-11-2022 ರಂದು ನಾನು ಶಾಲೆಯಲ್ಲಿ ಇದ್ದ ಕಾರಣ ಆರೋಪಿತರು ಮತ್ತು ನನ್ನ ಗಂಡನ ನಡುವೆ ಆಗಿದೆ ಎಂದು ಹೇಳಿದಂತಹ ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ದಿಃ 14-11-2022 ರಂದು ನಾನಾಗಲೀ ಅಥವಾ ನನ್ನ ಗಂಡನಾಗಲೀ 1 ನೇ ಆರೋಪಿಯ ವಿರುದ್ದ ಯಾವುದೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿ. ನಾನು ಪೋಲೀಸರ ಮುಂದೆ ದಿಃ 14-11-2022 ರಂದು ನನ್ನ ಹೇಳಿಕೆಯನ್ನು ಕೊಟ್ಟಿದ್ದೆ. ಫಿನಾಯಿಲ್ ಮತ್ತು ಆಲ್‌ಔಟ್ ಬಾಟಲಿಗಳನ್ನು ನಾನು ಪೋಲೀಸರಿಗೆ ಕೊಟ್ಟಿಲ್ಲ. ಸದರಿ ವಸ್ತುಗಳನ್ನು ನಾನು ಪೋಲೀಸರಿಗೆ ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ತೋರಿಸಿಲ್ಲ. ನನ್ನ ಗಂಡ ಸಾಕಷ್ಟು ಜನರ ಬಳಿ ಸಾಲ ಮಾಡಿರುತ್ತಾನೆ ಎಂದರೆ ಸರಿ. ಸಾಲ ಮರು ಪಾವತಿ ಮಾಡಿ ಎಂದು ಕೇಳಿದವರ ವಿರುದ್ದ ನನ್ನ ಗಂಡ ಜಾತಿನಿಂದನೆ ಪ್ರಕರಣವನ್ನು ದಾಖಲಿಸಿದ್ದಾನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಾನು ನನ್ನ ಗಂಡನ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಕೆ ಎಸ್ ಆರ್ ಟಿ ಸಿ ವಸತಿಗೃಹದಲ್ಲಿ ವಾಸ ಇದ್ದೇವೆ ಎಂದರೆ ಸರಿ. ಅಲ್ಲಿ ಬಹಳಷ್ಟು ಮಾನೆಗಳು ಇವೆ ಎಂದರೆ ಸರಿ. ಸದರಿ ವಸತಿ ಗೃಹಗಳ ಬಳಿ ಸಿಸಿ ಕ್ಯಾಮೆರಾ ಇದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಆರೋಪಿತರು ಜಾತಿ ಹಿಡಿದು ಬೈದು ಜಾತಿ ನಿಂದನೆ ಮಾಡದೇ ಇದ್ದರೂ ಸಹ ಮತ್ತು ಆತನಿಗೆ ಕೊಲೆ ಬೆದರಿಕೆ ಹಾಕದೇ ಇದ್ದರೂ ಸಹ ನಾನು ನನ್ನ ಗಂಡನ

ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**